ನವಮಂಗಳೂರು ಬಂದರು ಪ್ರದೇಶದಲ್ಲಿರುವ ಅನಧಿಕೃತ ಕಟ್ಟಡಗಳ ಬಗ್ಗೆ

713 - ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ನವಮಂಗಳೂರು ಬಂದರು ಪ್ರದೇಶದಲ್ಲಿ ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಂತೆ ಹಲವಾರು ಅನಧಿಕೃತ ಕಟ್ಟಡಗಳು ನಿರ್ಮಾಣಗೊಂಡಿರುವುದು ಸರ್ಕಾರದ ಗಮನದಲ್ಲಿದೆಯೇ ಇಂಥ ಅನಧಿಕೃತ ಕಟ್ಟಡಗಳನ್ನು ತೆಗೆಸಲು ಸರ್ಕಾರದವರು ಯೋಚಿಸಿದ್ದಾರೆಯೇ) ಹಾಗಿದ್ದಲ್ಲಿ ಆ ಕುರಿತು ಜರುಗಿಸಿರುವ ಕ್ರಮಗಳೇನು?*

ಆ) *ಸದರಿ ಕಟ್ಟಡಗಳಿಗೆ ಸಂಬಂಧಪಟ್ಟ ಪಂಚಾಯತ್‌ಗಳು ಪರವಾನಿಗೆಯನ್ನು ನೀಡಿವೆಯೇ, ನೀಡಿದ್ದಲ್ಲಿ ಅದು ಕಾನೂನು ಬಾಹಿರವಲ್ಲವೇ?*

ಇ) *ಇಂಥ ಅನಧಿಕೃತ ಕಟ್ಟಡಗಳನ್ನು ತೆಗೆಸಲು ಕ್ರಮ ಜರುಗಿಸುವುದು ಹಾಗೂ ಇನ್ನು ಮುಂದೆ ಅಲ್ಲಿ ಅಂಥ ಕಟ್ಟಡಗಳು ಬಾರದಂತೆ ಕಟ್ಟುನಿಟ್ಟಿನ ಕ್ರಮಗಳನ್ನು ಸರ್ಕಾರದವರು ಕೈಗೊಳ್ಳುವರೇ?*

ಶ್ರೀ ಶಿವನಾಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ನವಮಂಗಳೂರು ಬಂದರು ಪ್ರದೇಶದಲ್ಲಿ ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡು ಹಲವಾರು ಕಟ್ಟಡಗಳು ನಿರ್ಮಾಣಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸಲು ಮಾಲೀಕರಿಗೆ ನೋಟಿಸ್‌ಗಳನ್ನು ನೀಡಲಾಗುತ್ತದೆ.

ಆ) ಸದರಿ ನಿವೇಶನಗಳುಳ್ಳ ಭಾಗವು ಮಂಗಳೂರು ಬಂದರು ಪ್ರಾಧಿಕಾರಕ್ಕೆ ಸೇರಿದ್ದು, ಪ್ರಾಧಿಕಾರದವರು ಕಟ್ಟಡ ನಿರ್ಮಾಣಕ್ಕೆ ಅನುಮತಿ ನೀಡಿರುವುದು ಈ ವಲಯದ ಗಮನಕ್ಕೆ ಬಂದಿರುತ್ತದೆ ಮತ್ತು ಅಕ್ರಮ ಕಟ್ಟಡಗಳಿಗೆ ಈ ವಲಯದಿಂದ ಪರವಾನಿಗೆ ನೀಡಿರುವುದಿಲ್ಲ.

ಇ) ರಾಷ್ಟ್ರೀಯ ಹೆದ್ದಾರಿ ಇಕ್ಕೆಲಗಳಲ್ಲಿ ಕಟ್ಟಡ ನಿರ್ಮಾಣದ ಬಗ್ಗೆ ಕೇಂದ್ರ ಸರ್ಕಾರದ ಭೂ ಸಾರಿಗೆ ಸಚಿವಾಲಯದ ನಿಯಮಾವಳಿಯಂತೆ ಹೆದ್ದಾರಿ ಮಧ್ಯರೇಖೆಯಿಂದ ನಿರ್ದಿಷ್ಟ ಅಂತರದಲ್ಲಿ ಇಲಾಖೆಯ ಅನುಮತಿ ಪಡೆಯದೇ ಕಟ್ಟಡಗಳನ್ನು ನಿರ್ಮಿಸಬಾರದಾಗಿರುತ್ತದೆ ಇದಕ್ಕೆ ತದ್ವಿರುದ್ಧವಾಗಿ ಯಾವ ವ್ಯಕ್ತಿಯಾಗಲೀ:ಸಂಸ್ಥೆಯಾಗಲೀ ಕಟ್ಟಡ ನಿರ್ಮಿಸಿದಲ್ಲಿ ನಿಯಮಾವಳಿಯಂತೆ ಕ್ರಮ ಕೈಗೊಳ್ಳಲಾಗುತ್ತದೆ.

ಪಡಿತರ ಚೀಟಿ ಕುರಿತು

721 - ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ರಾಜ್ಯದಲ್ಲಿ ಪಡಿತರ ಚೀಟಿ ಸರಿಯಾಗಿ ವಿತರಣೆಯಾಗಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ, ಈ ಸಮಸ್ಯೆಯ ಪರಿಹಾರಕ್ಕೆ ಸರ್ಕಾರದ ಕ್ರಮವೇನು?*

ಶ್ರೀ ಎಸ್. ನಂಜಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ಅಂತಹ ಯಾವುದೇ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಆ) ಪಡಿತರ ಚೀಟಿ ವಿತರಣೆಯಲ್ಲಿ ಯಾವುದೇ ಲೋಪದೋಷಗಳುಂಟಾಗದಂತೆ ಎಲ್ಲ ಅಗತ್ಯ ಕ್ರಮ ವಹಿಸಲಾಗುತ್ತಿದೆ.